**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ- ಕರ್ನಾಟಕ**
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ
ಹೊಸ ಸಾರ್ವಜನಿಕ ಕಟ್ಟಡಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ,
ಬೆಂಗಳೂರು - 560 001

**ಸಂಖ್ಯೆ:**ಆರ್.ಎಂ.ಎಸ್.ಎ/ಎ-2/ಆ.ವಿ/ಎನ್‌ಸಿಇಆರ್‌ಟಿ/ಸಂಕಲನಾತ್ಮಕ ಪರೀಕ್ಷೆ/2017-18 **ದಿನಾಂಕ** : 18/09/2017

1025
18/9/17

ರವರಿಗೆ,

ವ್ಯವಸ್ಥಾಪಕ ನಿರ್ದೇಶಕರು,
ಕೆ.ಎಸ್.ಕ್ಯೂ.ಎ.ಎ.ಸಿ,
ಮಲ್ಲೇಶ್ವರಂ, ಬೆಂಗಳೂರು

ಮಾನ್ಯರೆ,

**ವಿಷಯ** : ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳಿಗೆ ಅನುಗುಣವಾಗಿ ಪರೀಕ್ಷೆಯನ್ನು ನಡೆಸುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಶೈಕ್ಷಣಿಕವಾಗಿ ಹಿಂದುಳಿದ 74 ಬ್ಲಾಕ್‌ಗಳಲ್ಲಿ ತಾಲ್ಲೂಕಿಗೆ ಒಂದರಂತೆ ಆದರ್ಶ ವಿದ್ಯಾಲಯಗಳು ನಡೆಯುತ್ತಿವೆ. ಶಾಲೆಗಳ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ಕೆ.ಎಸ್.ಕ್ಯೂ.ಎ.ಎ.ಸಿಯು 4ನೇ ತರಗತಿಯಿಂದ 9ನೇ ತರಗತಿಯವರೆಗೂ ಸಂಕಲನಾತ್ಮಕ ಪರೀಕ್ಷೆಯನ್ನು ನವೆಂಬರ್ 2017ರ ಮಾಹೆಯಲ್ಲಿ ರಾಜ್ಯದಾದ್ಯಂತ ನಡೆಸಲಾಗುತ್ತದೆ. 2017-18ನೇ ಸಾಲಿನಿಂದ ಆದರ್ಶ ವಿದ್ಯಾಲಯಗಳ 6ನೇ ತರಗತಿಗೆ ಎನ್.ಸಿ.ಈ.ಆರ್.ಟಿಯ ಕೆಳಕಂಡ ಪಠ್ಯಪುಸ್ತಕಗಳನ್ನು ಅಳವಡಿಸಲಾಗಿದೆ.

| Subject | Title of the NCERT Text Books for 6th standard |
|---|---|
| English | Honey Suckle(Text Book) |
| | A Pact with the Sun(Supplementary Reader) |
| Maths | (English medium) |
| Science | (English medium) |
| Hindi | Dhruva |

ಆದರ್ಶ ವಿದ್ಯಾಲಯಗಳಲ್ಲಿ ಈ ಮೇಲಿನ ಪಠ್ಯಪುಸ್ತಕಗಳನ್ನು ಆಧರಿಸಿ ಮಕ್ಕಳಿಗೆ ಈಗಾಗಲೇ ಬೋಧನೆ ಮಾಡುತ್ತಿರುವುದರಿಂದ ನಿಮ್ಮ ಸಂಸ್ಥೆಯಿಂದ ನಡೆಸಲಾಗುವ ಸಂಕಲನಾತ್ಮಕ ಪರೀಕ್ಷೆಗೆ ಕೆಳಕಂಡ ಅಂಶಗಳನ್ನು ಅನುಸರಿಸಿ ನಡೆಸುವಂತೆ ತಿಳಿಸಿದೆ.

1. ಈ ಪತ್ರದೊಂದಿಗೆ ಲಗತ್ತಿಸಿರುವ ಎಲ್ಲಾ ಆದರ್ಶ ವಿದ್ಯಾಲಯಗಳ 6ನೇ ತರಗತಿಗೆ ಮೇಲೆ ಸೂಚಿಸಿರುವ ಪಠ್ಯಪುಸ್ತಕಗಳಿಗೆ ಅನುಗುಣವಾಗಿ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸುವುದು.
2. ಸಮಾಜ ವಿಜ್ಞಾನ ಮತ್ತು ದ್ವಿತೀಯ ಭಾಷೆ-ಕನ್ನಡ, ಈ ವಿಷಯಗಳಿಗೆ ಕರ್ನಾಟಕ ಪಠ್ಯ ಪುಸ್ತಕ ಸಂಘದ ವತಿಯಿಂದ ಮುದ್ರಿಸಲಾಗಿರುವ ಪಠ್ಯಪುಸ್ತಕಗಳನ್ನು ಬಳಸುತ್ತಿರುವುದರಿಂದ ಇದಕ್ಕೆ ಅನುಗುಣವಾಗಿ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸುವುದು.
3. ಪ್ರತಿಯೊಂದು ಆದರ್ಶ ವಿದ್ಯಾಲಯದ 6ನೇ ತರಗತಿಗೆ 80 ಮಕ್ಕಳು ವ್ಯಾಸಂಗ ಮಾಡಲು ಅವಕಾಶವಿದ್ದು ಬಹುತೇಕ ಶಾಲೆಗಳಲ್ಲಿ 80 ಮಕ್ಕಳು ದಾಖಲಾಗಿರುತ್ತಾರೆ. ಅದರಂತೆ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿ ಮುದ್ರಿಸಿ ಸಕಾಲದಲ್ಲಿ ಸರಬರಾಜು ಮಾಡಿ ಪರೀಕ್ಷೆ ನಡೆಯುವಂತೆ ಕ್ರಮ ವಹಿಸಲು ತಿಳಿಸಿದೆ.

**ಸ್ಥಳ** : ಬೆಂಗಳೂರು

ರಾಜ್ಯ ಯೋಜನಾ ನಿರ್ದೇಶಕರು
ಎಸ್.ಎಸ್.ಎ ಮತ್ತು ಆರ್.ಎಮ್.ಎಸ್.ಎ
ಬೆಂಗಳೂರು
18/9/17

ಪ್ರತಿಯನ್ನು

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು ರವರಿಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಸಲ್ಲಿಸಿದೆ.